# 10. ಬೇಬಿಕಾರ್ನ್

ಮುಸುಕಿನ ಜೋಳದ ಹೆಣ್ಣು ಹೂವಿನಿಂದ ರೇಷ್ಮೆಯಂತಹ ಎಳೆಗಳು ಹೊರಬಂದ ಒಂದೆರೆಡು ದಿನಗಳಲ್ಲಿ ಕೊಯ್ಲು ಮಾಡಿ ತೆಗೆದ ಎಳೆ ತೆನೆಯೇ ಬೇಬಿಕಾರ್ನ್. ಈ ಬೆಳೆಯು ಎಲ್ಲಾ ಕೃಷಿ ವಲಯಗಳಲ್ಲೂ ಬೆಳೆಯಲು ಸೂಕ್ತವಾಗಿದೆ. ಈ ಬೆಳೆಯನ್ನು ಸಾಂಪ್ರಾದಾಯಿಕವಾಗಿ ಮೇವಿನ ಮುಸುಕಿನ ಜೋಳ ಬೆಳೆಯುವ ಪ್ರದೇಶಗಳಲ್ಲಿ ಬೆಳೆಯಬಹುದು.

**ತಳಿಗಳು ಮತ್ತು ವಿಶೇಷ ಗುಣಗಳು**

| *ತಳಿಗಳು* | *ಬಿತ್ತನೆ ಕಾಲ* | *ಕಾಲಾವಧಿ (ದಿನಗಳು)* | *ಇಳುವರಿ (ಕ್ವಿಂ. / ಎ)* |
|---|---|---|---|
| ಅಲ್ಪಾವಧಿ ಸಂಕರಣ ತಳಿಗಳು | ಜೂನ್–ಜುಲೈ<br>ಸೆಪ್ಟೆಂಬರ್–ಅಕ್ಟೋಬರ್<br>ಜನವರಿ–ಫೆಬ್ರವರಿ | 65–75 | ತೆನೆ 30–35<br>ಹಸಿ ಮೇವು 12–15 ಟನ್ |

**ಬೇಸಾಯಕ್ಕೆ ಬೇಕಾಗುವ ಸಾಮಗ್ರಿಗಳು (ಎಕರೆಗೆ)**

| *ಸಾಮಗ್ರಿಗಳು* | ಪ್ರಮಾಣ |
|---|---|
| ಬಿತ್ತನೆ ಬೀಜ (ಕಿ.ಗ್ರಾಂ) | 16 |
| ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ (ಟನ್) | 4 |
| **ರಸಾಯನಿಕ ಗೊಬ್ಬರಗಳು (ಕಿ.ಗ್ರಾಂ)** | |
| ಸಾರಜನಕ | 60 |
| ರಂಜಕ | 30 |
| ಪೊಟ್ಯಾಷ್ | 16 |

**ಬಿತ್ತನೆ:** ಬಿತ್ತುವುದಕ್ಕೆ ಮೊದಲು 30 ಕಿ.ಗ್ರಾಂ. ಸಾರಜನಕ ಪೂರ್ತಿ ರಂಜಕ ಮತ್ತು ಪೊಟ್ಯಾಷ್ ಅನ್ನು ಮಣ್ಣಿನಲ್ಲಿ ಸೇರಿಸುವುದು. ಬೀಜವನ್ನು 1.5 ಅಡಿ ಸಾಲುಗಳಲ್ಲಿ ಬೀಜದಿಂದ ಬೀಜಕ್ಕೆ 8 ಅಂಗುಲ ಅಂತರದಲ್ಲಿ ಬಿತ್ತುವುದು. ಬಿತ್ತನೆಯಾದ 20–25 ದಿವಸಗಳ ನಂತರ ಕಳೆ ತೆಗೆದು ಎಕರೆಗೆ 30 ಕಿ.ಗ್ರಾಂ. ಸಾರಜನಕವನ್ನು ಒದಗಿಸುವ ರಸಗೊಬ್ಬರವನ್ನು ಮೇಲುಗೊಬ್ಬರವಾಗಿ ಕೊಡುವುದು.

**ನೀರಾವರಿ ಮತ್ತು ಅಂತರ ಬೇಸಾಯ:** ಬೀಜ ಮೊಳೆಯುವ ಸಮಯ, ತೆನೆ ಮೂಡುವ ಸಮಯ (26–40 ದಿವಸಗಳು) ಮತ್ತು ತೆನೆ ಅಭಿವೃದ್ಧಿಯಾಗುವ ಹಂತದಲ್ಲಿ (41ನೇ ದಿನದಿಂದ ತೆನೆ ಕಟಾವಿನವರೆಗೂ) ಸಾಕಷ್ಟು ನೀರು ಕೊಡುವುದು ಬಹಳ ಅವಶ್ಯಕ. ಮೇಲುಗೊಬ್ಬರ ಕೊಟ್ಟ ನಂತರ ಮಣ್ಣು ಏರುಹಾಕುವುದು. ಉತ್ತಮ ಗುಣಮಟ್ಟದ ಬೇಬಿಕಾರ್ನ್ ಉತ್ಪಾದನೆಗೆ ಗೊಂಡೆ ಅಥವಾ ತುರಾಯಿ ತೆಗೆಯುವುದು ಅತ್ಯಗತ್ಯ. ಗೊಂಡೆ ಅಥವಾ ತುರಾಯಿಯು ಗಂಡು ಹೂವಾಗಿದ್ದು ಇದರಿಂದ ಬರುವ ಪುಷ್ಪರೇಣುಗಳು ಉದುರಿ ಪರಾಗಸ್ಪರ್ಶಕ್ಕೆ ನಾಂದಿಯಾಗುವುದರಿಂದ. ತೆನೆಯಲ್ಲಿ ಕಾಳುಗಳ ಬೆಳೆವಣಿಗೆಯಾಗಿ ಬೇಬಿಕಾರ್ನ್‌ನ ಗುಣಮಟ್ಟ ಕುಸಿಯುತ್ತದೆ.

**ಅಂತರ ಬೆಳೆಯಾಗಿ ಬೇಬಿಕಾರ್ನ್:** ತಿಂಗಳ ಹುರುಳಿಯ ಪ್ರತಿ 10 ಸಾಲಿನ ನಂತರ 1 ಸಾಲು ಬೇಬಿಕಾರ್ನ್ ಅನ್ನು ಅಂತರ ಬೆಳೆಯಾಗಿ ಬೆಳೆಯುವುದರಿಂದ ಉತ್ಕೃಷ್ಟ ವಾತಾವರಣ ಸೃಷ್ಟಿಯಾಗಿ ಉತ್ತಮ ಬೆಳವಣಿಗೆ ಹೊಂದುವುದಲ್ಲದೆ ರೋಗಗಳ ಹರಡುವಿಕೆಯನ್ನು ತಡೆಗಟ್ಟಬಹುದುದಾಗಿದೆ. ಅಂತರ ಬೆಳೆಯಿಂದ ತರಕಾರಿ (ಬೇಬಿಕಾರ್ನ್) ಮತ್ತು ಮೇವನ್ನು ಪಡೆಯುವುದರ ಜೊತೆಗೆ ಅಧಿಕ ಆದಾಯ ಪಡೆಯಲು ಸಾಧ್ಯವಾಗುತ್ತದೆ.

**ಕಳೆ ನಿರ್ವಹಣೆ:** ಮರಳು ಭೂಮಿಯಲ್ಲಿ ಎಕರೆಗೆ 1 ಕಿ.ಗ್ರಾಂ. ಅಥವಾ ಕಪ್ಪು ಭೂಮಿಯಲ್ಲಿ 1.2 ಕಿ.ಗ್ರಾಂ. ಶೇ.50 ಅಟ್ರಾಜಿನ್‌ನ್ನು 300 ಲೀ. ನೀರಿನಲ್ಲಿ ಕರಗಿಸಿ ಬಿತ್ತನೆಯಾದ ದಿನದ ಅಥವಾ ಒಂದು ದಿನದ ನಂತರ ಮಣ್ಣಿನ ಮೇಲೆ ಸಿಂಪಡಿಸುವುದು. ಬಿತ್ತನೆಯಾದ 20–25 ಹಾಗೂ 30–35 ದಿವಸಗಳಲ್ಲಿ ಅಂತರ ಬೇಸಾಯ ಮಾಡಿ ಸಾಲುಗಳಿಗೆ ಮಣ್ಣು ಹೇರಿಸುವುದರ ಮೂಲಕ ಕಳೆಗಳನ್ನು ನಿರ್ವಹಣೆ ಮಾಡಬಹುದು.

**ಸಸ್ಯ ಸಂರಕ್ಷಣೆ:** ನೀರಾವರಿ ಮುಸುಕಿನಜೋಳದ ಬೆಳೆಗೆ ಸೂಚಿಸಿರುವ ಕ್ರಮಗಳನ್ನು ಅನುಸರಿಸುವುದು.

**ಕಟಾವು:** ಬಿತ್ತನೆಯಾದ 55 ರಿಂದ 60 ದಿವಸಗಳ ನಂತರ ಬೇಬಿ ಕಾರ್ನ್ ಮೊದಲನೇ ಕಟಾವಿಗೆ ಬರುತ್ತದೆ. ಬೇಬಿಕಾರ್ನ್‌ನ ಎಳೆ ತೆನೆಗಳು ಎರಡು ದಿನಗಳಿಗೊಮ್ಮೆ ಒಟ್ಟು 7 ರಿಂದ 8 ಬಾರಿ ಕಟಾವಿಗೆ ಬರುತ್ತವೆ.

**ಮುಖ್ಯವಾದ ಕಡಿಮೆ ಖರ್ಚಿನ ಬೇಸಾಯ ಕ್ರಮಗಳು**

- ಉತ್ತಮ ಗುಣಮಟ್ಟದ ಬೆಳೆ ಪಡೆಯಲು ರೇಷ್ಮೆ ಎಳೆ ಬಂದ ಒಂದೆರೆಡು ದಿನಗಳಲ್ಲಿ ತೆನೆಯನ್ನು ಬಿಡಿಸುವುದು. ಈ ಸಮಯದಲ್ಲಿ ರೇಷ್ಮೆ ಎಳೆಯು ಸುಮಾರು 0.5–0.75 ಅಂಗುಲಗಳಷ್ಟು ಹೊರಬಂದಿರುತ್ತದೆ.
- ಗೊಂಡೆ ಅಥವಾ ತುರಾಯಿ ಸಸ್ಯದಿಂದ ಹೊರಬರುವ ಮೊದಲು ಅಥವಾ ಬಂದ ತಕ್ಷಣ ಕಿತ್ತು ತೆಗೆಯುವುದು.
- ತೆನೆಯನ್ನು ಕಟಾವು ಮಾಡಿದ ತಕ್ಷಣ ಮಾರುಕಟ್ಟೆಗೆ ಸಾಗಿಸುವುದು.
- ಕೃಷಿ ಕಾರ್ಮಿಕರ ಮತ್ತು ಮಾರುಕಟ್ಟೆಯಲ್ಲಿ ಒತ್ತಡ ಕಡಿಮೆ ಮಾಡಲು ಹಾಗೂ ನಿರಂತರ ಆದಾಯ ಬರುವಂತೆ ಮಾಡಲು 10 ರಿಂದ 15 ದಿವಸಗಳ ಅಂತರದಲ್ಲಿ ಹಂತ ಹಂತವಾಗಿ ಬಿತ್ತನೆ ಮಾಡುವುದು.

# ಬೇಬಿ ಕಾರ್ನ್‌ನಿಂದ ತಯಾರಿಸಬಹುದಾದ ಮೌಲ್ಯವರ್ಧಿತ ಪದಾರ್ಥಗಳು

